ಅಸಲು ದಾವಾ ನಂ.371/2011

ಪಿ.ಡಬ್ಲೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 05-01-2018

**ಮುಂದುವರೆದ ಪಾಟೀ ಸವಾಲು**- ಶ್ರೀ ಟಿ.ಕೆ.ಎಂ. ವಕೀಲರಿಂದ

3 ನೇ ಪ್ರತಿವಾದಿ ಅವಿವಾಹಿತ ಎಂದರೆ ಸರಿ . ಅವರು ಜಂಗಮ ದೀಕ್ಷೆ ಪಡೆದಿದ್ದಾರೆ ಎಂದರೆ ಸರಿ . ನಮ್ಮ ವಂಶ ವೀರಶೈವ ಮತದ ರಂಬಾಪುರಿ ಶಾಖಾ ಮಠಕ್ಕೆ ಸೇರುತ್ತದೆ. ನುಗ್ಗೇಹಳ್ಳಿಯಲ್ಲಿ ಶಾಖಾಮಠವಿದೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಎನ್.ಕೆ.ಮೃತ್ಯುಂಜಯಸ್ವಾಮಿ ಎಂಬುವವರು ಶಾಖಾಮಠದ ಮಠಾದಿಪತಿಯಾಗಿದ್ದರು ಎಂದರೆ ಸರಿ . ಅವರು ವಿವಾಹವಾದ್ದರಿಂದ ಮಠವನ್ನು ತೊರೆದು ಮೈಸೂರಿನಲ್ಲಿ ಸಾಂಸಾರಿಕ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ . ಅವರ ಸ್ಥಾನಕ್ಕೆ ಯಾರೂ ನೇಮಕಗೊಂಡಿಲ್ಲ. ಅವರು ಹೋದ ನಂತರ 3 ನೇ ಪ್ರತಿವಾದಿ ಜಂಗಮ ದೀಕ್ಷೆ ಪಡೆದರು ಎಂದರೆ ಸರಿ . ಅವರು ಈಗ ರಂಬಾಪುರಿ ಶಾಖಾ ಮಠಕ್ಕೆ ಮಠಾಧಿಪತಿಯಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ವಿವಾಹ ಲಗ್ನ ಪತ್ರಿಕೆಯಲ್ಲಿ ಶ್ರೀ ಮಹೇಶ್ವರ ಸ್ವಾಮಿ ಅವರ ಆಶೀರ್ವಾದದೊಂದಿಗೆ ಎಂದು ಬರೆಸಿರುತ್ತೇನೆ ಎಂದರೆ ಸರಿ . 3 ನೇ ಪ್ರತಿವಾದಿ ನನ್ನ ಮಗನಿಗೆ ಅಣ್ಣ ಆಗಿದ್ದರಿಂದ ಹಾಗೇ ಬರೆಸಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. 3 ನೇ ಪ್ರತಿವಾದಿ ಎಲ್ಲಾ ಧಾರ್ಮಿಕ ಕಾರ್ಯಗಳಲ್ಲಿ ಪಾಲುಗೊಳ್ಳುತ್ತಾರೆ ಎಂದರೆ ಸರಿ. ಧಾರ್ಮಿಕ ಚಟುಚಟಿಕೆ , ವಿವಾಹ ಕಾರ್ಯಗಳು 3 ನೇ ಪ್ರತಿವಾದಿಯ ನೇತೃತ್ವದಲ್ಲಿ ನಡೆಯುತ್ತಿವೆ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ 5 ಗದ್ದುಗೆಗಳು ಇವೆ . 3 ನೇ ಪ್ರತಿವಾದಿಗೆ 15 ಶಿಷ್ಯಂದಿರು ಇದ್ದಾರೆ ಎಂದರೆ ಸರಿ . ಮಠದ ಪರವಾಗಿ ದಾವಾ ಸ್ವತ್ತು 3 ನೇ ಪ್ರತಿವಾದಿ ಪ್ರತಿನಿಧಿಯಾಗಿರುವುದರಿಂದ ಅವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿ ಎ.ಸಿ. ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು , ಅದು ವಜಾ ಆಗಿದೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು , ತಹಸೀಲ್ದಾರರು ಸ್ಥಳ ತನಿಖೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸ್ಥಳ ತನಿಖೆ ಮಾಡಿ ಗ್ರಾಮಸ್ಥರ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 100 ವರ್ಷಗಳ ಹಿಂದೆ ಧಾರ್ಮಿಕ ಚಟುವಟಿಕೆಗಳಿಗೆ ಮತ್ತು ಶಾಖಾಮಠಕ್ಕೆ ಮೀಸಲಿಡಲಾಗಿತ್ತು ಎಂದರೆ ಸರಿಯಲ್ಲ. ಖಾತೆಯು ಮಠದ ಹೆಸರಿಗೆ ಆಗದೇ ಇರುವ ಸಮಯವನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತು ನಮ್ಮ ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾವಾವನ್ನು ನಮಗೆ ಪಾಲು ಬರಬೇಕೆಂದು ಹೂಡಿರುತ್ತೇನೆ. ದಾವಾ ಸ್ವತ್ತು 2 ಎಕರೆ 34 ಗುಂಟೆ ಇದೆ , ಅದರ ಚೆಕ್ಕುಬಂದಿ ಪೂರ್ವಕ್ಕೆ - ಕಾಲು ದಾರಿ , ಪಶ್ಚಿಮಕ್ಕೆ - ಬಸ್ ಸ್ಟ್ಯಾಂಡ್ ಮತ್ತು ತೋಟಗಾರಿಕಾ ಇಲಾಖೆ , ಉತ್ತರಕ್ಕೆ - ಹರಿಜನ ಕಾಲೋನಿ ಮತ್ತು ವಿಷಕಂಠೇಗೌಡರ ಮನೆ , ದಕ್ಷಿಣಕ್ಕೆ - ಜಯದೇವಪ್ಪನವರ ತೋಟ ಇದೆ . ನನ್ನ ಗಂಡ ತೀರಿಕೊಂಡು 9 ವರ್ಷಗಳಾಗಿದೆ. ನನ್ನ ಗಂಡನ ಅಣ್ಣ ತಮ್ಮಂದಿರು ಅನ್ಯೋನ್ಯವಾಗಿದ್ದರು . ನನ್ನ ಮಾವ ಬದುಕಿದ್ದಾಗ ನನ್ನ ಗಂಡ ಮತ್ತು ಅಣ್ಣತಮ್ಮಂದಿರು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಖಾತೆ ಮಾಡಿಸಿಕೊಂಡು ಅನುಭವಿಸುತ್ತಿದ್ದರು ಎಂದರೆ ಸರಿ . ನನ್ನ ಗಂಡನ ಸಹೋದರರಾದ ಚನ್ನಬಸವಯ್ಯ , ಮರುಳಾರಾಧ್ಯರವರು ತಮ್ಮ ಪಾಲಿನ

ಆಸ್ತಿಗಳನ್ನು ಮಾರಾಟ ಮಾಡಿಕೊಂಡಿರುತ್ತಾರೆ. ನನ್ನ ಗಂಡನ ಪಾಲಿನ ಆಸ್ತಿಯನ್ನು ಉಳಿಸಿಕೊಂಡಿರುತ್ತೇನೆ. ದಾವಾ ಸ್ವತ್ತಿಗೆ ನಾನಾಗಲೀ ನನ್ನ ಗಂಡನಾಗಲೀ ಕಂದಾಯ ಕಟ್ಟಿಲ್ಲ. ನನ್ನ ಮಾವ ತೀರಿಕೊಂಡು 27 ವರ್ಷಗಳಾಗಿದೆ. ನನ್ನ ಗಂಡ ಮತ್ತು ಸಹೋದರರು ಆಸ್ತಿಗಳನ್ನು 1981 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗ ಮಾಡಿಕೊಳ್ಳುವ ಸಂದರ್ಭದಲ್ಲಿ ದಾವಾ ಸ್ವತ್ತನ್ನು ಸೇರಿಸಿಲ್ಲ. ದಾವಾ ಸ್ವತ್ತನ್ನು ರಂಭಾಪುರಿ ಶಾಖಾಮಠಕ್ಕೆ ಬಿಟ್ಟಿದ್ದರಿಂದ ಅದನ್ನು ವಿಭಾಗದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ರಂಭಾಪುರಿ ಶಾಖಾಮಠದ ಮಾಲೀಕತ್ವ ಮತ್ತು ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ . ಈ ವಿಚಾರ ನನಗೆ ಗೊತ್ತಿದ್ದರೂ ಸಹ ನನ್ನ ಗಂಡ ತೀರಿಕೊಂಡ ನಂತರ ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವಾ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಹಕ್ಕುಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಮಠಕ್ಕೆ ಕಮಾನು ನಿರ್ಮಾಣ ಮಾಡುತ್ತಿದ್ದಾಗ ನಾವು ಅಡ್ಡಿ ಪಡಿಸಿರುತ್ತೇವೆ ಎಂದರೆ ಸರಿ . ನಂತರ ಈ ದಾವಾ ಹೂಡಿರುತ್ತೇನೆ ಎಂದರೆ ಸರಿ .

**ಮರು ವಿಚಾರಣೆ**- ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ